ಸಾಕ್ಷಿಯನ್ನು ದಿನಾಂಕ 05.08.2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಭೋಧಿಸಲಾಗಿದೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ :**

8. ನಾನು ಶಾಲೆ ಕಲಿತಿಲ್ಲ. ಈ ಕೇಸಿನ ಕುರಿತು ನನಗೆ ಏನು ಗೊತ್ತಿರುವುದಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿರುವ ಸಂಗತಿಗಳನ್ನು ಚಾಸಾ-9/ರಂಗನಾಥ ಈತನು ಹೇಳು ಎಂದು ಹೇಳಿದ್ದರಿಂದ ಹೇಳಿದ್ದೇನೆ ಅಂದರೆ ಸರಿ. ಕಂಪ್ಲೇಟ್ ದಲ್ಲಿ ಏನು ಬರೆಯಲಾಗಿದೆ ಅಂದರೆ ನನಗೆ ಗೊತ್ತಿಲ್ಲ ಎಂಬುದು ಸರಿ.

9. ಪೊಲೀಸರು ನನ್ನ ಮುಂದೆ ಪಂಚನಾಮೆಯನ್ನು ಮಾಡಿಲ್ಲ ಮತ್ತು ಯಾವುದೇ ವಸ್ತುಗಳನ್ನು ಜಪ್ತಿಮಾಡಿಲ್ಲ ಅಂದರೆ ಸರಿ. ನಮ್ಮ ಮತ್ತು ಅರೋಪಿಯ ಮಧ್ಯದಲ್ಲಿ ಬೇರೆ ವಿಷಯಕ್ಕೆ ಸಂಬಂಧಿಸಿ ಕಿರಿಕಿರಿ ಇದೆ ಅಂದರೆ ಸರಿ. ನಾನು ಹೇಳಿದಂತೆ ಗಾಯಗಳು ನನ್ನ ಗಂಡನಿಗೆ ಆಗಿಲ್ಲ ಅಂದರೆ ಸರಿ.

10. ಚಾಸಾ-9/ರಂಗನಾಥ ಈತನು ಹೇಳಿಕೊಟ್ಟಂತೆ ನಾನು ಮುಖ್ಯ ವಿಚಾರಣೆಯ ದಿನದಂದು ಮು.ಮಾ. 1 ರಲ್ಲಿರುವ ಬಟ್ಟೆಗಳನ್ನು ಮತ್ತು ಮು.ಮಾ. 2 ರಲ್ಲಿರುವ ರಕ್ತ ಹತ್ತಿದ ಮಣ್ಣನ್ನು ಮತ್ತು ಮು.ಮಾ.3 ರಲ್ಲಿರುವ ಚಾಕುವನ್ನು ಗುರುತಿಸಿದ್ದೇನೆ ಅಂದರೆ ಸರಿ. ಮು.ಮಾ. 1 ರಿಂದ 3 ಇವುಗಳನ್ನು ಯಾರು ಮತ್ತು ಎಲ್ಲಿ ತಂದು ಕೊಟ್ಟಿದ್ದಾರೆ ಎಂಬುದು ನನಗೆ ಗೊತ್ತಿರುವುದಿಲ್ಲ ಅಂದರೆ ಸರಿ.

11. ನನಗೆ ಮತ್ತು ಅವರಿಗೆ ವೈಮನಸ್ಸು ಇದ್ದದ್ದರಿಂದ ಚಾಸಾ-9/ರಂಗನಾಥ ಈತನು ಹೇಳಿಕೊಟ್ಟಂತೆ ಮತ್ತು ನನ್ನ ಗಂಡ ಹೇಳಿಕೊಟ್ಟಂತೆ ನಾನು ಸಾಕ್ಷಿ ಹೇಳಿದ್ದೇನೆ ಅಂದರೆ ಸರಿ.

(ಸರ್ಕಾರಿ ಅಭಿಯೋಜಕರು ಸಾಕ್ಷಿ ಮುಖ್ಯ ವಿಚಾರಣೆ ಮತ್ತು ಪಾಟೀ ಸವಾಲಿನಲ್ಲಿ ತದ್ವಿರುದ್ಧ ಹೇಳಿಕೆಗಳನ್ನು ನೀಡಿದ್ದರಿಂದ ಪಾಟೀ ಸವಾಲಿಗೆ ಅವಕಾಶ ಕೋರಿದ್ದಾರೆ. ಸಾಕ್ಷಿಯ ಎರಡು ಹೇಳಿಕೆಗಳನ್ನು ನ್ಯಾಯಾಲಯ ನೋಡಿದೆ. ಆ ಹೇಳಿಕೆಗಳನ್ನು ಗಮನಿಸಿದಾಗ ಪಾಟೀ ಸವಾಲಿಗೆ ಅವಕಾಶ ನೀಡುವುದು ಸೂಕ್ತ ಎಂದು ಕಂಡು ಬಂದಿದ್ದರಿಂದ ಪಾಟೀ ಸವಾಲಿಗೆ ಅವಕಾಶ ನೀಡಲಾಗಿದೆ.)

**ಪಾಟೀ ಸವಾಲು ಸರ್ಕಾರಿ ಅಭೀಯೋಜಕರಿಂದಃ**

12. ಆರೋಪಿ ನನ್ನ ಗಂಡನನ್ನು ಚಾಕುವಿನಿಂದ ಚುಚ್ಚುವುದನ್ನು ನಾನು ನೋಡಿದ್ದೇನೆ ಅಂದರೆ ಸರಿಯಲ್ಲ. ಆರೋಪಿ ನನ್ನ ಗಂಡನನ್ನು ಅವಾಚ್ಯ ಶಬ್ದಗಳಿಂದ ಬೈದದ್ದನ್ನು ಮತ್ತು ಬೆದರಿಕೆ ಹಾಕಿದ್ದನ್ನು ನಾನು ನೋಡಿದ್ದೇನೆ ಅಂದರೆ ಸರಿಯಲ್ಲ. ರಂಗನಾಥ ಈತನು ದೂರು ಕೊಡಲು ನನಗೆ ಹೇಳಿಲ್ಲ ಅಂದರೆ ಸಾಕ್ಷಿ ದೂರಿನಲ್ಲಿರುವ ವಿಷಯಗಳು ಗೊತ್ತಿಲ್ಲ ಎಂದು ಉತ್ತರಿಸಿದ್ದಾರೆ. ರಂಗನಾಥ ಈತನು ಚಾಾಕುವಿನಿಂದ ನನ್ನ ಗಂಡನನ್ನು ಚುಚ್ಚಿದ್ದಾನೆಂದು ಹೇಳುವಂತೆ ನನಗೆ ಹೇಳಿಲ್ಲ ಅಂದರೆ ಸಾಕ್ಷಿ ಸುಮ್ಮನಿದ್ದಾಳೆ.

13. ಪೊಲೀಸರಿಗೆ ನಾನು ನನ್ನ ಗಂಡನ ರಕ್ತ ಹತ್ತಿದ ಬಟ್ಟೆಗಳನ್ನು ನೀಡಿದ್ದೇನೆ ಅಂದರೆ ಸರಿಯಲ್ಲ. ಆರೋಪಿ ಕೈಯಲ್ಲಿ ಮು.ಮಾ. 3 ಇದ್ದದ್ದನ್ನು ನಾನು ನೋಡಿದ್ದೇನೆ ಅಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸತ್ಯ ಇವೆ ಮತ್ತು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸಾಕ್ಷಿ ಸಮ್ಮನಿದ್ದಾಳೆ.

**ಮರುವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ.ಇದೆ.

**(ಬಿ.ಬಿ.ಜಕಾತಿ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಮತ್ತು
C/c ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು.